ಈ ಕಾಮಗಾರಿಗೆ ಇಲ್ಲಿಯವರೆಗೆ ವೆಚ್ಚ ಮಾಡಲಾದ ಮೊತ್ತ 23.50 ಲಕ್ಷ ರೂ.ಗಳು.

ಊ) ಈ ಕೆಲಸವನ್ನು ಪೂರ್ಣಗೊಳಿಸಲು ಮಳೆಗಾಲ ಹೊರತು ಪಡಿಸಿ 12 ತಿಂಗಳುಗಳ ಕಾಲಮಿತಿಯನ್ನು ಮರು ಟೆಂಡರ್‌ನಲ್ಲಿ ನಿಗದಿ ಪಡಿಸಲಾಗಿದೆ.

ಋ) ಈ ಕೆಲಸವನ್ನು ನವೆಂಬರ್–2011ರೊಳಗೆ ಪೂರ್ಣ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಅಂಗನವಾಡಿ ಕೇಂದ್ರಗಳ ಬಗ್ಗೆ

431 (931) ಶ್ರೀ ನರೇಂದ್ರ ಬಾಬು.ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ ಹಾಗೂ ಸದರಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅವು ಯಾವುವು;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ತೆಗೆದುಕೊಂಡಿದೆ;

ಇ) ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ಅನುದಾನ ಎಷ್ಟು;

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 27 ಅಂಗನವಾಡಿ ಕೇಂದ್ರಗಳಿವೆ ಇವುಗಳಲ್ಲಿ 24 ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅವುಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ನಿವೇಶನ ಮತ್ತು ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇ) ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಇಲಾಖಾ ವಂತಿಗೆಯ ಕಟ್ಟಡ ನಿರ್ಮಿಸಲು 469.70 ಲಕ್ಷಗಳನ್ನು ನಬಾರ್ಡ್ ಸಹಾಯ ಅನುದಾನದಿಂದ

980.00 ಲಕ್ಷಗಳನ್ನು ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ 4000.00 ಲಕ್ಷ ಅನುದಾನವನ್ನು ಒದಗಿಸಲಾಗಿರುತ್ತದೆ. ಬೆಂಗಳೂರು ನಗರ ಜಿಲ್ಲೆಗೆ ರೂ 20 ಲಕ್ಷಗಳ ಅನುದಾನ ನಿಗದಿಯಾಗಿದೆ.

ಅನುಬಂಧ

ಮಹಾಲಕ್ಷ್ಮಿ ಬಡಾವಣೆಯ ವಿಧಾ ಸಭಾ ಕ್ಷೇತ್ರದಲ್ಲಿ ರುವ ಅಂಗನವಾಡಿ ಕೇಂದ್ರಗಳ ಕಟ್ಟಡ ಮಾಹಿತಿ

ಕ್ರ ಸಂ.	ಅಂಗನವಾಡಿ ಕೇಂದ್ರದ ಹೆಸರು	ಕಟ್ಟಡದ ಮಾಹಿತಿ
1	ಜಾರಕ್ ಬಂಡೆ–1	ಸ್ವಂತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ
2	ಜಾರಕ್ ಬಂಡೆ–2	ಸ್ವಂತ ಕಟ್ಟಡ
3	ಜೈಮಾರುತಿ ನಗರ–1	ಸ್ವಂತ ಕಟ್ಟಡ
4	ಜೈಮಾರುತಿ ನಗರ–2	ಬಾಡಿಗೆ ಕಟ್ಟಡ
5	ದೀನಾಬಂಧು ನಗರ	ತಾತ್ಕಾಲಿಕವಾಗಿ ಸಮುದಾಯದವರು ನೀಡಿದ ಕಟ್ಟಡ
6	ಕಂಠೀರವ ನಗರ–1	ಬಾಡಿಗೆ ಕಟ್ಟಡ
7	ಕಂಠೀರವ ನಗರ–2	ಬಾಡಿಗೆ ಕಟ್ಟಡ
8	ಕಂಠೀರವ ನಗರ–3	ಬಾಡಿಗೆ ಕಟ್ಟಡ
9	ಕಂಠೀರವ ನಗರ–4	ಬಾಡಿಗೆ ಕಟ್ಟಡ
10	ಕಂಠೀರವ ನಗರ–5	ಕಾರ್ಪೋರೇಷನ ಕಟ್ಟಡ
11	ಪರಿಮಳ ನಗರ	ಬಾಡಿಗೆ ಕಟ್ಟಿ
12	ಕಮಲಾನಗರ–1	ಕಾರ್ಪೋರೇಷನ ಶಾಲೆ
13	ಕಮಲಾನಗರ–2	ದೇವಸ್ಥಾನ
14	ಕಮಲಾನಗರ–3	ಸರ್ಕಾರಿ ಶಾಲೆ
15	ಕಮಲಾನಗರ–4	ಸರ್ಕಾರಿ ಶಾಲೆ
16	ಗೆಳೆಯರ ಬಳಗ	ಬಾಡಿಗೆ ಕಟ್ಟಡ
17	ಜೆ.ಸಿ.ನಗರ–1	ಬಾಡಿಗೆ ಕಟ್ಟಡ

18	ಜೆ.ಸಿ.ನಗರ–2	ದೇವಸ್ಥಾನ
19	ಜೆ.ಸಿ.ನಗರ–3	ಬಾಡಿಗೆ ಕಟ್ಟಡ
20	ಜೆ.ಸಿ.ನಗರ–4	ಬಾಡಿಗೆ ಕಟ್ಟಡ
21	ಕುರುಬರ ಹಳ್ಳಿ	ಸಮುದಾಯ ಕಟ್ಟಡ
22	ಕಾವೇರಿ ನಗರ	ಬಾಡಿಗೆ ಕಟ್ಟಡ
23	ಗೋವರ್ಧನ–1	ದೇವಸ್ಥಾನ
24	ಗೋವರ್ಧನ–2	ಖಾಸಗಿ ಕಟ್ಟಡ (ಉಚಿತ)
25	ಎಂ.ಜಿ.ಸ್ಲಂ	ದೇವಸ್ಥಾನ
26	ಬೋವಿಪಾಳ್ಯ	ಶಾಲೆಯಲ್ಲಿ
27	ಸಂಜಯಗಾಂಧಿನಗರ	ದೇವಸ್ಥಾನ

ರಾಜ್ಯದಲ್ಲಿ 'ಭಾಗ್ಯಲಕ್ಷ್ಮಿ' ಯೋಜನೆಯಡಿಯಲ್ಲಿ ಹೆಣ್ಣು ಮಕ್ಕಳಿಗೆ ವಿತರಿಸಲಾದ ಬಾಂಡ್‌ಗಳ ಬಗ್ಗೆ

432 (932) ಶ್ರೀ ನೆ.ಲ. ನರೇಂದ್ರ-ಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಹೆಣ್ಣು ಮಕ್ಕಳಿಗೆ ವಿತರಿಸಲಾದ ಬಾಂಡುಗಳೆಷ್ಟು (ವಿಧಾನ ಸಭಾ ಕ್ಷೇತ್ರವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ಪ್ರತೀ ವರ್ಷ ಎಷ್ಟೆಷ್ಟು ಬಾಂಡ್‌ಗಳನ್ನು ನೀಡಲಾಗಿದೆ (ವಿವರ ನೀಡುವುದು);

ಇ) 2008–09, 2009–10 ಸಾಲಿನಲ್ಲಿ ಈ ಯೋಜನೆಗೆ ಸರ್ಕಾರದ ಆಯವ್ಯಯದಲ್ಲಿ ಒದಗಿಸಲಾದ ಅನುದಾನವೆಷ್ಟು ಹಾಗೂ 2010–11ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ಒದಗಿಸಲಾಗುವುದು (ವರ್ಷವಾರು ವಿವರವಾದ ಮಾಹಿತಿಯನ್ನು ನೀಡುವುದು)?

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2006–07, 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಒಟ್ಟು 7,20,562 ಫಲಾನುಭವಿಗಳಿಗೆ